# ಪದಬಂಧ



ಎಡದಿಂದ ಬಲಕ್ಕೆ :

1. ದನ ಕರುಗಳನ್ನು ಸಾಕಿ ಸಾಕಿ ಕಡೆಗೂ ಬಡವನಾಗಿಯೇ ಇದ್ದಾನೆ (4)
3. ಸಾವಧಾನದಿಂದ ನಡೆದ ವಿಚಾರ ವಿನಿಮಯ, ಚರ್ಚೆ (3)
4. ಶಂಕರನಿಗೆ ಸಮರ್ಪಿಸಲೆಂದು ಇಷ್ಟೆಲ್ಲ ಸಂಗ್ರಹ ! (3)
6. ಪೆದ್ದರನ್ನು ಆಕರ್ಷಿಸಿದ್ದು ಅನ್ಯರ ಹಣ (4)
7. ಕಾಲನ್ನು ಇಟ್ಟಲ್ಲೆಲ್ಲ ಬರೀ ಬಂಡೆ ಭೂಮಿ (4)
9. ಮರೆತಂತೆ ನಟಿಸಿ ಮಾಡಿದ್ದೆಲ್ಲ ಬರೀ ಪಕ್ಷಪಾತ (4)
12. ಪಂಚೆ ಉಟ್ಟೊಡನೆ ನೆನಪಾದದ್ದು ಶ್ರೀರಾಮನ ವನವಾಸ ತಾಣ (4)
14. ಚಿತ್ತಾರ ಚರ್ಮದ ಭಾರೀ ಬೆಕ್ಕು ಹಿಂದು ಮುಂದು (3)
15. ಆಸ್ತಿಯನ್ನೆಲ್ಲ ಕಳೆದುಕೊಂಡು ನಿರೀಶ್ವರವಾದಿ ಆದ (3)
16. ಕಾಟ ನೀಡಿದಾತನದು 'ಒಳ್ಳೆಯದಲ್ಲದ ಮನೆ' (4)

ಮೇಲಿಂದ ಕೆಳಕ್ಕೆ :

1. ದೇಶವನ್ನು ಪ್ರೀತಿಸುತ್ತಾನೆಂಬುದಕ್ಕೆ ಉದಾಹರಣೆ ಇದೆಯೇ ?(4)
2. ಶೇಖರನಂತೆಯೇ ಇದೂ ಕೂಡ ಬೆನ್ನೆಲುಬಿರುವ ಪ್ರಾಣಿ (4)
3. ಸಹಚರನಿದ್ದರೆ ಮಾತ್ರ ಅವನ ಓಡಾಟ (3)
5. ಇಡೀ ಮರವನ್ನೇ ಬೇರೆಡೆಗೆ ಸಾಗಿಸುವುದೇ ? (3)
6. ಪತಿವ್ರತೆಯರಿಂದ ಆ ಪ್ರದೇಶ ಸುತ್ತುವರಿಯಲ್ಪಟ್ಟಿದೆ (4)
8. ಲಾಠಿಗಳನ್ನು ಬೀಸುತ್ತ ಪಟ ಪಟ ಬಡಿದಾಟ (4)
10. ಮರೆಯಲಾದೀತೇ, ನಿಸರ್ಗದ ಚೆಲುವು, ಸೊಬಗು ? (3)
11. ಚೀರಾಡಿದ್ದಕ್ಕೆ ಕಾರಣ ಮರುಭೂಮಿಯಲ್ಲಿ ಕಂಡ ಬಿಸಿಲುಗುದುರೆ (4)
12. ಪುಂಗಿಯನ್ನೂದಿ ಮರುಳು ಮಾಡಿದ್ದು ಮಹಾ ವಂಚನೆ (4)
13. ತವರಿನ ಕಥೆ ಹೇಳಲೂ ಹಣ ಕೇಳುವ ವ್ಯಾಪಾರಿ ಇವನು (3)

## 01-02-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಭ್ಯುದಯ ; 3. ಸಂಧಾನ ; 4. ಮನ್ನಿಸು ; 6. ಸಂಹಾರಕ ; 8. ಪಕ್ಷಪಾತ ; 10. ನಗೆನುಡಿ ; 12. ನಡೆನುಡಿ ; 16. ಸುಗಂಧ ; 17. ರುಸುಮು ; 18. ನಟರಾಜ

ಮೇಲಿಂದ ಕೆಳಕ್ಕೆ :

1. ಅನಲ ; 2. ಯಮಳ ; 3. ಸಂಚಾರ ; 5. ಸುಭಿಕ್ಷ ; 6. ಸಂಪ್ರದಾನ ; 7. ಕಳ್ಳಗಿಂಡಿ ; 8. ಪಲಾಯನ ; 9. ತಳ್ಳುಗಾಡಿ ; 11. ನುಡಿಸು ; 13. ಡೆನ್ನಮು (=ಮುನ್ನಡೆ ಬುಡಮೇಲು ) ; 14. ಬಂಧನ ; 15. ಗುರುಜ (= ಜರುಗು ತಲೆಕೆಳಗು)

---

## ಪ್ರಶ್ನಾಂಕಣ

# ಕಪ್ಪೆ ಮತ್ತು ನೆಲಗಪ್ಪೆ: ಏನು ಅಂತರ?

ಕಪ್ಪೆ (ಫ್ರಾಗ್) ಮತ್ತು ನೆಲಗಪ್ಪೆ (ಟೋಡ್) ಇವೆರಡೂ ಉಭಯವಾಸಿಗಳೇ ಆಗಿವೆ. ಉಭಯವಾಸಿಗಳ 'ಅನುರಾನ್' ವರ್ಗಕ್ಕೇ ಸೇರಿವೆ. ಉಭಯವಾಸಿಗಳ (ಹಾಗೆಂದರೆ ನೀರಿನಲ್ಲೂ, ನೆಲದ ಮೇಲೂ ವಾಸಿಸಬಲ್ಲ ಪ್ರಾಣಿಗಳು) ಒಟ್ಟು ಏಳು ಸಾವಿರ ಪ್ರಭೇದಗಳಲ್ಲಿ ಕಪ್ಪೆ ಮತ್ತು ನೆಲಗಪ್ಪೆಗಳದೇ ಸಮೀಪ ಆರು ಸಾವಿರದ ಐನೂರು ಪ್ರಭೇದಗಳಿವೆ! ಒಂದೇ ಆಯುಷ್ಯದ, ಸರಿ ಸುಮಾರು ಒಂದೇ ಆಹಾರ ಕ್ರಮದ ಇವುಗಳದು ಮೇಲ್ನೋಟಕ್ಕೆ ಸ್ಥೂಲವಾಗಿ ಒಂದೇ ರೂಪ ಕೂಡ.

ಆದರೂ ವಾಸ್ತವವಾಗಿ ನೆಲಗಪ್ಪೆಗಳಿಗೂ (ಚಿತ್ರ 1) ಕಪ್ಪೆಗಳಿಗೂ (ಚಿತ್ರ 2 ಮತ್ತು 3) ಹಲವಾರು ಸ್ಪಷ್ಟ ವ್ಯತ್ಯಾಸಗಳಿವೆ. ಪ್ರಮುಖವಾದ ಅಂತರಗಳು ಇವು :




* ಕಪ್ಪೆಗಳದು ತೆಳ್ಳನೆಯ ಶರೀರ ; ಮುಟ್ಟಿದರೇ ಜಾರುವಂತೆ ಸದಾ ಶ್ಲೇಷ್ಮ ದ್ರವ ಒಸರುವ, ತೇವಮಯ, ನುಣುಪಾದ ಚರ್ಮ. ತದ್ವಿರುದ್ಧವಾಗಿ ನೆಲಗಪ್ಪೆಗಳದು ದುಂಡಾದ ದಪ್ಪನ್ನ ದೇಹ ; ಒರಟು ಒರಟಾದ, ಗಂಟು ಗಂಟಾದ, ಒಣ ಚರ್ಮ.

* ಕಪ್ಪೆಗಳದು ನದಿ, ಸರೋವರ, ಕೆರೆ, ಕುಂಟೆ ಇತ್ಯಾದಿ ಜಲಾವಾರಗಳಲ್ಲಿ ಅಥವಾ ನೀರಿನ ನೆಲೆಗಳ ಸನಿಹದಲ್ಲೇ ವಾಸ. ಸದಾ ತೇವಾಂಶ ಭರಿತವಾದ ಮಳೆ ಕಾಡುಗಳಲ್ಲಿ ವೃಕ್ಷಗಳ ಮೇಲೂ ಕಪ್ಪೆಗಳು ವಾಸಿಸುತ್ತವೆ. ನೆಲಗಪ್ಪೆಗಳು ನೀರಿನಲ್ಲಿ ಬದುಕಬಲ್ಲವಾದರೂ ಅವುಗಳದು ಸಾಮಾನ್ಯವಾಗಿ ನೆಲದ ಮೇಲೇ ಜೀವನ.

* ಕಪ್ಪೆಗಳ ಹಿಂಗಾಲುಗಳು ಬಹಳ ಉದ್ದ ; ಬಹಳ ಶಕ್ತಿಯುತ. ಹಾಗಾಗಿ ಕಪ್ಪೆಗಳು ಭಾರೀ ದೂರಗಳಿಗೆ ಹಾರಬಲ್ಲವು ; ಬಹು ಎತ್ತರಕ್ಕೆ ನೆಗೆಯಬಲ್ಲವು. ಹಿಂಗಾಲುಗಳಲ್ಲಿನ "ಜಾಲ ಪಾದ"ಗಳಿಂದಾಗಿ ಕಪ್ಪೆಗಳು ನೀರಿನಲ್ಲಿ ವೇಗವಾಗಿ ಈಜಬಲ್ಲವು. ನೆಲಗಪ್ಪೆಗಳು ಈಜಬಲ್ಲವಾದರೂ ಅವುಗಳದು ನೆಲದ ಮೇಲೆ ನಡೆದಾಡಲು ಮತ್ತು ಕುಪ್ಪಳಿಸಲು ತುಂಬ ಸೂಕ್ತವಾದ ಕುಳ್ಳು ಕಾಲುಗಳು.

* ಕಪ್ಪೆಗಳದು ಮುಖದಿಂದ ಮುಂಚಾಚಿ ಉಬ್ಬಿ ನಿಂತ ಕಣ್ಣುಗಳು. ನೆಲಗಪ್ಪೆಗಳ ಕಣ್ಣುಗಳದು ಕಡಿಮೆ ಉಬ್ಬು. ನೆಲಗಪ್ಪೆಗಳ ಕಣ್ಣುಗಳ ಹಿಂಬದಿಯಲ್ಲಿ ವಿಷ ಗ್ರಂಥಿಗಳಿವೆ. ಅವನ್ನು ತಿನ್ನಲು ಬಾಯಿ ಹಾಕುವ ನಾಯಿ, ಬೆಕ್ಕುಗಳಂತಹ ಪ್ರಾಣಿಗಳಿಗೆ ನೆಲಗಪ್ಪೆಗಳ ವಿಷ ಪ್ರಾಣಹಾರಕವಾಗಬಹುದು ಕೂಡ. ಕಪ್ಪೆಗಳ ಮೇಲ್ದವಡೆ ಮತ್ತು ಬಾಯೊಳಗಿನ ಮೇಲ್ಭಾಗದಲ್ಲಿ "ಹಲ್ಲು"ಗಳನ್ನು ಹೋಲುವಂಥ ನಿರ್ಮಿತಿಗಳಿವೆ. ನೆಲಗಪ್ಪೆಗಳಲ್ಲಿ ಇಂಥ ರಚನೆಗಳಿಲ್ಲ.

* ಕಪ್ಪೆಗಳು ತಮ್ಮ ಮೊಟ್ಟೆಗಳನ್ನು ಗೊಂಚಲು ಗೊಂಚಲಾಗಿ ನೀರಲ್ಲಿ ತೇಲಿಬಿಡುತ್ತವೆ. ಆದರೆ ನೆಲಗಪ್ಪೆಗಳು ತಮ್ಮ ಮೊಟ್ಟೆಗಳನ್ನು ನೀರಲ್ಲಿ ಬೆಳೆದು ನಿಂತ ಗಿಡಗಳ ಎಲೆಗಳ ಮೇಲೆ ದಾರದಲ್ಲಿ ಪೋಣಿಸಿದ ಮಣಿಗಳಂತೆ ಎಳೆ ಎಳೆಯಾಗಿ ಇಡುತ್ತವೆ.

■ ಎನ್. ವಾಸುದೇವ್